# ಕೊಲೆ! ಅವರ್ ಬಿಟ್ ಇವರ್ ಬಿಟ್ ಮತ್ತ್ಯಾರು?

ಪ್ಲಾಂಟರ್ ಸೋಮಣ್ಣನವರು ಆಯೋಜಿಸಿದ್ದ ಪಾರ್ಟಿಯಲ್ಲಿ ಪ್ರೊಫೆಸರ್ ಭಾಸ್ಕರ್ ಕಂಠಮಟ್ಟ ಕುಡಿದರು. 'ಪ್ರೊಫೆಸರ್ ಇತ್ತೀಚೆಗೆ ಸಿಕ್ಕಾಪಟ್ಟೆ ಕುಡೀತಿದ್ದಾರೆ' ಎಂದು ಯಾರೋ ಪಕ್ಕದವರು ಡಾ. ಗಣೇಶರ ಕಿವಿಯಲ್ಲಿ ಪಿಸುಗುಟ್ಟಿದರು. 'ಚೇಂಬರಲ್ಲೇ ತಂದಿಟ್ಟು ಕುಡೀತಾರಂತೆ' – ಮತ್ತೊಬ್ಬರು ಗುಣಗಾನ ಮಾಡಿದರು. ಪಾರ್ಟಿ ಮುಗಿದು ಎಲ್ಲರೂ ಹೊರಟು ನಿಂತಾಗ ಪ್ರೊ. ಭಾಸ್ಕರ್ ನಡೆಯುವ ಸ್ಥಿತಿಯಲ್ಲಿರಲಿಲ್ಲ. ಅವರ ಕೈ ಹಿಡಿದೆತ್ತಿ ತನ್ನ ಹೆಗಲಿಗೆ ಹಾಕಿಕೊಂಡು ಡಾ. ಗಣೇಶ್ ತನ್ನ ಕಾರಿನತ್ತ ಕರೆದೊಯ್ಯತೊಡಗಿದರು.

'ನನ್ನ ಕಾರು ನನ್ನ ಕಾರು' ಎನ್ನುತ್ತಿದ್ದ ಪ್ರೊಫೆಸರಿಗೆ, 'ಅದಿಲ್ಲೇ ಇರಲಿ. ನಾಳೆ ಕೊಂಡೋದರಾಯಿತು' ಎನ್ನುತ್ತ ಅವರನ್ನು ತನ್ನ ಕಾರಿನಲ್ಲಿ ಕುಳ್ಳಿರಿಸಿ ಅವರ ಮನೆಗೆ ಕರೆದೊಯ್ದರು. ಗೇಟಿನ ಬಳಿ ಕಾರು ನಿಲ್ಲಿಸಿ ಬಾಗಿಲು ತೆರೆದು ಪ್ರೊಫೆಸರನ್ನು ಕೆಳಗಿಳಿಸಿದರು.

'ಓಕೆ' ಎನ್ನುತ್ತಾ ಪ್ರೊಫೆಸರ್ ಮೆಟ್ಟಿಲೇರುವ ಪ್ರಯತ್ನ ಮಾಡಿ ಅಲ್ಲೇ ಕುಸಿದರು. ಡಾ. ಗಣೇಶ್‌ರು ಕಾರಿನಿಂದಿಳಿದು ಓಡಿ ಬಂದು ಅವರನ್ನು ಹಿಡಿದೆತ್ತಿ ಮತ್ತೆ ಕಾರಿನಲ್ಲಿ ಕುಳ್ಳಿರಿಸಿ, ಬಲಗಡೆಯಿಂದ ಮನೆಯ ಅಂಗಳಕ್ಕೆ ಬಂದು ಪೋರ್ಟಿಕೋದ ಪಕ್ಕ ಕಾರು ನಿಲ್ಲಿಸಿದರು. ಸುತ್ತಲು ಕತ್ತಲಾವರಿಸಿತ್ತು. ಕಾರಿನ ಹೆಡ್‌ಲೈಟೇ ಬೆಳಕು. ಮನೆಯ ಬಾಗಿಲು ತೆರೆದೇ ಇತ್ತು. ಪ್ರೊ. ಭಾಸ್ಕರ್‌ರನ್ನು ಕಾರಿನಿಂದಿಳಿಸಿ ಆತು ಒಳಗಡೆ ತರುತ್ತಾ ಇಡಿಯ ಮನೆಯೂ ಕತ್ತಲಲ್ಲಿದ್ದುದನ್ನು ಗಮನಿಸಿ, 'ಶೀಲಾ, ಶೀಲಾ' ಎಂದು ಕೂಗಿದರು.

ನಿದ್ರೆ ಬಂದಿರಬೇಕು ಎಂದುಕೊಂಡು 'ದೀಪೂ, ದೀಪೂ' ಎಂದರು. ಆತನದ್ದೂ ಉತ್ತರವಿಲ್ಲ. ಈ ಕತ್ತಲಲ್ಲಿ ಬಾಗಿಲು ತೆರೆದಿಟ್ಟು ಹೀಗೆ ಯಾರಾದರೂ ನಿದ್ದೆ ಹೋಗುತ್ತಾರೆಯೆ ಅಂದುಕೊಂಡು ಒಂದು ಕೈಯಲ್ಲಿ ಪ್ರೊಫೆಸರನ್ನು ಹಿಡಿದು ಸ್ವಿಚ್ ಅದುಮಿದರು. ಬೆಳಕು ಬೆಳಗಿತು. ಹಾಗೆಯೆ ಅವರನ್ನು ಸೋಫಾದ ಮೇಲೆ ಕೆಡವಿದರು.

ಪ್ರೊಫೆಸರ್ ಬಿದ್ದುಕೊಂಡಲ್ಲಿಂದಲೇ ವಿಚಿತ್ರವಾಗಿ ತೇಗತೊಡಗಿದರು. 'ಶೀಲಾ' ಎನ್ನುತ್ತಾ ಡಾ. ಗಣೇಶ್ ನೀರಿಗಾಗಿ ಒಳಗೆ ಓಡಿದರು. ಸ್ವಿಚ್ ಅದುಮಿದಾಗ ಎದುರಿನ ಮಲಗುವ ಕೋಣೆಯ ಬಾಗಿಲ ಚಿಲಕ ಹೊರಗಿನಿಂದ ಹಾಕಿದ್ದು ಕಾಣಿಸಿತು. 'ಇದ್ಯಾಕೆ ಈ ಕೋಣೆಗೆ ಹೊರಗಿನಿಂದ ಚಿಲಕ ಹಾಕಿದೆ' ಎಂದುಕೊಳ್ಳುತ್ತಾ ಚಿಲಕ ತೆಗೆದು ಬಾಗಿಲು ದೂಡಿದರು. ಸ್ವಿಚ್ ಅದುಮಿದಾಗ ಒಳಗಡೆ ಶೀಲಾ ಮಲಗಿದ್ದುದು ಕಂಡುಬಂತು.

'ಶೀಲಾ, ಪ್ರೊಫೆಸರಿಗೆ ನೀರು ಬೇಕಂತೆ' ಎಂದರು. ಶೀಲಾ ಮಿಸುಕಾಡಲಿಲ್ಲ. ಹೀಗೂ ಬೋರಲಾಗಿ ಬಿದ್ದು ನಿದ್ದೆ ಹೋಗುತ್ತಾರೆಯೇ ಎಂದುಕೊಂಡು ಮುಟ್ಟಲೋ ಬೇಡವೋ ಎಂದು ಸಂಶಯಪಡುತ್ತ ಕೊನೆಗೂ 'ಶೀಲಾ' ಎಂದು ಮುಟ್ಟಿ ಎಚ್ಚರಿಸಲು ಪ್ರಯತ್ನಿಸಿದರು. ಆಕೆಯ ಕೈಯ ಶೀತಲ ಸ್ಪರ್ಶದಿಂದ ದಿಗಿಲುಗೊಂಡು 'ಪ್ರೊಫೆಸರ್, ಪ್ರೊಫೆಸರ್' ಎಂದು ಕೂಗುತ್ತಾ ಹೊರಕ್ಕೆ ಓಡಿದರು. ಒಮ್ಮೆಲೆ ಅಮಲು ಇಳಿದಂತಾಗಿ ಪ್ರೊಫೆಸರ್ ಏನೆಂದು ವಿಚಾರಿಸಿದರು.

'ಒಳಗೆ ಬನ್ನಿ, ಶೀಲಾಗೆ ಏನೋ ಆಗಿಬಿಟ್ಟಿದೆ, ಬನ್ನಿ' ಎನ್ನುತ್ತಾ ಅವರನ್ನು ಎಬ್ಬಿಸಿ ಕರೆದೊಯ್ದರು. 'ಶೀಲಾ, ಶೀಲಾ' ಪ್ರೊ. ಭಾಸ್ಕರ್ ಕರೆದು ನೋಡಿದರು. ಆಕೆ ಓಗೊಡಲಿಲ್ಲ. ಡಾ. ಗಣೇಶ್ ಆಕೆಯ ಪಲ್ಸ್ ನೋಡಿ ಹತಾಶೆ ವ್ಯಕ್ತಪಡಿಸಿದರು. ಪ್ರೊ. ಭಾಸ್ಕರ್ ಅಲ್ಲೇ ಕುಸಿದರು. ಡಾ. ಗಣೇಶ್, 'ಹೊರಗಡೆಯಿಂದ ಕೋಣೆಯ ಬಾಗಿಲು ಹಾಕಿತ್ತು. ನಾನೇ ತೆರೆದೆ. ಈಗೇನು ಮಾಡೋಣ, ಪೊಲೀಸರಿಗೆ ಫೋನ್ ಮಾಡಲೆ?' ಎನ್ನುತ್ತ ಸ್ಟೇಷನ್‌ಗೆ ಡಯಲ್ ಮಾಡಿದರು. ಜೊತೆಗೆ ಪ್ಲಾಂಟರ್ ಸೋಮಣ್ಣನವರಿಗೂ ಚಂದ್ರಪ್ಪನವರಿಗೂ ಡಯಲ್ ಮಾಡಿದರು. ಸ್ವಲ್ಪ ಹೊತ್ತಿನಲ್ಲೇ ಎಲ್ಲರೂ ಬಂದು ಸೇರಿದರು. ಸೋಮಣ್ಣನವರ ಜೊತೆಗೆ ನಟರಾಜ್ ಪಟ್ಟಣಶೆಟ್ಟಿ ಕೂಡ ಇದ್ದರು. ಪೊಲೀಸರು ಶವವನ್ನು ಕಸ್ಟಡಿಗೆ ತೆಗೆದುಕೊಂಡರು. ಫೋಟೊಗ್ರಾಫರ್ ಮನೆಯ, ಶವದ ಫೋಟೊ ತೆಗೆಯುತ್ತಿದ್ದಂತೆಯೆ,

